ವಿಜಯವಾಣಿ
ಕನ್ನಡಿಗರ ಧ್ವನಿ

# ಟಾಪ್ ನ್ಯೂಸ್ ವಿಐಇ–2014 ಕ್ರೀಡಾಕೂಟ: ಸುರಾನಾ, ಆಳ್ವಾಸ್‌ಗೆ ಜಯ

**ಬೆಂಗಳೂರು:** ನವೀನ್ ಶೆಟ್ಟಿ(100*) ಬಾರಿಸಿದ ಆಕರ್ಷಕ ಶತಕದ ನೆರವಿನಿಂದ ಆಳ್ವಾಸ್ ಕಾಲೇಜು ತಂಡ ಅಖಿಲ ಭಾರತ ವಿಐಇ-2014 ಕ್ರೀಡಾಕೂಟದ ಕ್ರಿಕೆಟ್ ಪಂದ್ಯದಲ್ಲಿ ಬೆಂಗಳೂರು ಕ್ರೈಸ್ಟ್ ವಿವಿ ವಿರುದ್ಧ ಜಯ ದಾಖಲಿಸಿದೆ.

ಇನ್ನುಳಿದ ಪಂದ್ಯಗಳಲ್ಲಿ ಬೆಂಗಳೂರಿನ ಸುರಾನಾ ಕಾಲೇಜು ತಂಡ ಗುರುನಾನಕ್ ಕಾಲೇಜು ವಿರುದ್ಧ, ಬೆಂಗಳೂರಿನ ಪ್ರಸಿಡೆನ್ಸಿ ಕಾಲೇಜು ತಂಡ ಬೆಂಗಳೂರು ಜೈನ್ ಸಿಎಮ್‌ಎಸ್ ವಿರುದ್ಧ ಗೆಲುವು ಕಂಡುಕೊಂಡಿದೆ. ಹಾಕಿ ಪಂದ್ಯದಲ್ಲಿ ಬೆಂಗಳೂರಿನ ಕ್ರೈಸ್ಟ್ ವಿವಿ 2-0 ಅಂತರದಿಂದ ಆರ್‌ವಿ ಎಂಜಿನಿಯರಿಂಗ್ ಕಾಲೇಜು ವಿರುದ್ಧ ಗೆಲುವು ಸಾಧಿಸಿದೆ.

**ವಾಲಿಬಾಲ್:** ಜಯನಗರದ ಮಾಧವ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈನ ಡಿಬಿ ಜೈನ್ ಕಾಲೇಜು 25-10, 25-14 ಅಂತರದಿಂದ ಕ್ರೈಸ್ಟ್ ಕಾಲೇಜು ತಂಡವನ್ನು ಸೋಲಿಸಿದೆ.

**ಬಾಸ್ಕೆಟ್‌ಬಾಲ್:** ಮಾಧವ್ ಪಾರ್ಕ್‌ನಲ್ಲಿ ನಡೆದ ಪಂದ್ಯಗಳಲ್ಲಿ ಶ್ರೀಲಂಕಾದ ಇಸಿಪಥನಾ ಕಾಲೇಜು ತಂಡ 18-17 ಅಂತರದಿಂದ ಅಲಿಯನ್ಸ್ ಕಾಲೇಜು ತಂಡದ ವಿರುದ್ಧ, ಸುರಾನಾ ಕಾಲೇಜು ತಂಡ 32-13 ಅಂತರದಿಂದ ಜೈನ್ ಸಿಎಂಎಸ್ ವಿರುದ್ಧ, ಮಂಗಳೂರಿನ ನಿಟ್ಟೆ ತಂಡ 19-18 ಅಂತರದಿಂದ ಬೆಂಗಳೂರಿನ ಜೈನ್ ವಿವಿ ತಂಡವನ್ನು ಮಣಿಸಿತು.